ತಾನೆ....!'

'ಅದೂ ಕಷ್ಟ ಅಂತಾಳಪ್ಪ. ಅವ್ನು ಶರತ್ತ್ ಅಂತ ಇದ್ದನಲ್ಲ ನಮ್ಮ ಕ್ಲಾಸ್ಮೇಟ್ ಮತ್ತೆ ಅವ್ಳ ಎಕ್ಸ್ ಬಾಯ್ ಫ್ರೆಂಡ್; ತಾನೂ ಹಾಗೇ ಸ್ವತಂತ್ರವಾಗಿ ಇನ್ವೆಷನ್ಸ್ ಮಾಡ್ತೀನಿ ಅಂತ, ಮೈಸೂರು ಪಕ್ಕ ಹಳ್ಳೀಕೆರೆಹುಂಡಿಯಲ್ಲಿ ಲ್ಯಾಂಡ್ ಎಲ್ಲ ಪರ್ಚೇಸ್ ಮಾಡಿ, ಫುಲ್ ತೋಟದ್ದ್ ಮನೆಯೆಲ್ಲ ಮಾಡಿ, ಇಂಟರ್ನೆಟ್ ಬೇರೆ ಹಾಕ್ಸಿ, ಅಲ್ಲೇ ಸೆಟ್ಲ್ ಆಗಿ ನಾನ್ ನಂದೇ ಸ್ವಂತ ಏನೋ ಸಾಫ್ಟ್ವೇರ್ ಡೆವಲಪ್ಟ್ ಮಾಡ್ತೀನಿ ಅಂತ ಕೂತ... ಇರೋ ಬರೋ ದುಡ್ಡೆಲ್ಲ ಆ ಡ್ರೈ ಜಾಗಕ್ಕೆ ಹಾಕಿ ಕೊನೆಗೇ ಎಷ್ಟು ಡಿಗ್ ಮಾಡಿದ್ರು ನೀರ್ ಸಿಗ್ದೇ... ಪಕ್ಕದ್ ಲ್ಯಾಂಡ್ ಓನರ್ ಜತೆ ಬೋರ್ ವಿಶ್ಯಕ್ಕೆ ಜಗ್ಳ ಎಲ್ಲ ಆಗಿ, ಆ ಕಡೆ ಎಲೆಕ್ಟ್ರಿಕ್ ಫೆನ್ಸ್ ಹಾಕಿಸ್ತೀನೆ ಅಂತ ಇವ್ನು ಹಟಕ್ಕೆ ಬಿದ್ದು.... ಈಗ ಆ ಭೂಮಿಯೆಲ್ಲ ಹುಲ್ಲು ಬೆಳೆದು ಚಿರತೆ ನರಿಗಳು ಓಡಾಡ್ತಾ ಇದೆಯಂತೆ ಅಲ್ಲಿ.... ಈ ದೊಡ್ಡ ಮನುಷ್ಯ ಅದನ್ನು ಅವ್ನ ಸ್ಟೇಟಸಲ್ಲಿ ಹಾಕಿದ್ದಾನೆ ಅಂತೆ...'

'ಓ... ಸುಷ್ಮಾನೇ ಪರ್ವಾಗಿಲ್ಲ ಹಂಗಾದ್ರೆ.... ಹೇಗೋ ದುಡ್ಡ್-ಗಿಡ್ಡ್ ಸಂಪಾದಿಸ್ತಾ ಇದ್ದಾಳೆ.... ನಮ್ಮ ಆ ಸುಡ್ಗಾಡ್ ಶಾಲೆಯಲ್ಲಿ ಓದಿದವರಲ್ಲೊ ಉದ್ಧಾರ ಆಗಿದ್ದು ಅಂದ್ರೆ ಆ ಭಟ್ಟ ಮತ್ತೆ ಈ ಸುಷ್ಮಾ ಮಾತ್ರ ಅನ್ಸುತ್ತೇ...'

'ಆ ಭಟ್ಟ ಬಿಡೋ ಮಹಾ ಚಿಣ್ ಮಿಣಿಕಿ; ಅವರಪ್ಪನೂ ಅಲ್ಲೇ ಸ್ಕೂಲ್ ಮಾಸ್ಟರ್ ಬೇರೆ, ಟೀಚರ್ಸೆಲ್ಲ ಅವ್ನ ಅಂಡ್ ಬಡೀತಾ ಇದ್ರೂ..'

'ಅದೇ ನಮ್ಗೆ ಎಲ್ಲಾ ಅಂಡ್ಗೆ ಹೊಡಿದಿದ್ದೇ ಆಯ್ತು... ಇದು ನಮ್ಮ ಇಂಡಿವಿಜುಯಲ್ ಇನ್ವೆಶನ್ಸ್!'

'ಬಟ್ ಆ ಸ್ಕ್ರೀನ್ ರೈಟರು ಕೂಡ ನಮ್ಮ ಸ್ಕೂಲ್ ಅಲ್ಯುಮಿನಿನೇ ಅಲ್ವಾ.... ಅವ್ನು ಈ ಸಕ್ಸಸ್‌ಫುಲ್ ಪಾಸ್ ಔಟ್ ಬಳಗಕ್ಕೆ ಸೇರ್ತಾ ಇದ್ನೋ ಏನೋ... ಬಟ್ಟ್...'

'...ಸಕ್ಸಸ್‌ಫುಲ್ ಸುಸೈಡ್ ಮ್ಯಾನ್ ಆದ ಅವ್ನು... ಕೊರೊನಾ ಟೈಮಲ್ಲಿ ಯಾವ ಸಿನಿಮಾನೂ ಸಿಗ್ದೇ ವಾಪಾಸ್ಸು ಸಿಟಿಗೆ ಬಂದ್ ಒಂದ್ ಜೆರಾಕ್ಸ್ ಪ್ರಿಂಟಿಂಗ್ ಕಂಪ್ಯೂಟರ್ ಅಂಗ್ಡಿ ಇಟ್ಟಿದ್ದ... ಅಲ್ಲಿಗೆ ಒಬ್ಳು ಮುಸ್ಲಿಂ ಹುಡ್ಗಿ ಬರ್ತಾ ಇದ್ಲು... ಈ ಗೂಬೆ ನನ್ಮಗ ನಲವತ್ತೈದು ವರ್ಷ ಆದ್ರೂ ಇನ್ನೂ ಲವ್ವ್ ಮಾಡ್ತೀನೀ ಅಂತ ಅವ್ಳ ಜತೆ ಮಾತುಕತೆ ಶುರು ಮಾಡ್ದ ಅಲ್ವ...?'

'ಆ ಹುಡ್ಗಿ ಎಳ್ಸು...ಮತ್ತೆ ಚೆಲ್ಲ್...ಚೆಲ್ಲ್...; ಇವ್ನ ಜತೆ ಸುಮ್ನೆ ಮೆಸೇಜು ಮಾಡೋದು... ಅಂಗ್ಡಿಗೆ ಬಂದಾಗ ರೊಮ್ಯಾಂಟಿಕ್ಕಾಗಿ ಆಡೋದು... ಗುಟ್ಟಾಗಿ ಕಿಸಿಯೋದು ಎಲ್ಲಾ ಮಾಡ್ತಾ ಇದ್ಲು... ಈ ಗಂಡ್ಸಿಗೆ ಮದ್ವೇ ಆಗಿ ಮಗಳ್ ಬೇರೆ... ಬಟ್ ಅವ್ಳಿಗೆ ನಿಜಕ್ಕೂ ನನ್ನ್ ಮೇಲೆ ಪ್ರೀತಿ ಇದ್ಯಾ ಅಂತ ಚೆಕ್ ಮಾಡ್ತೀನೆ ಅಂತ ಡೀಪ್ ಆಗಿ ಹೋಗಿ, ಇವ್ನ ಮನೇಲಿ ದೊಡ್ಡ ರಂಪಾಟ ಆಗಿ ... ಆ ಹುಡ್ಗಿ ಮನೆಯವರೆಲ್ಲ ಬಂದು ಗಲಾಟೆ ಮಾಡಿ ಇವ್ನು 80ನೆ ಇಸ್ವೀ ಲವರ್ರ ಥರ ಅವ್ಳೇ ಬೇಕು ಅಂತ ಹಿಂದೆ ಬಿದ್ದು... ಆ ಹುಡ್ಗಿಗ್ ಪಾಪ ತಲೆಕೆಟ್ಟು.... ಅವ್ರ ಸಂಬಂಧಿಕ್ರೂ... ಪಳ್ಳಿ ಜನ ಎಲ್ಲ ಅವ್ಳಿಗೆ ಉಗ್ದು.... ಕೊನೆಗೆ ಬೇಗ್ ಮದ್ವೆ ಆಗಿ ಆಕೆ ಹೋದ್ಲು ಸೌದಿಗೆ.... ಈ ಕಡೆ ಇವ್ನ ಹೆಂಡ್ತಿ ಇವ್ನ ಬಿಟ್ಲು.... ದುಡ್ಡೆಲ್ಲ ಹಂಗೇ



ಹಿಂಗೇ ಹೋಗಿ ಕೊನೆಗೆ ಅವನ ಅಮ್ಮನ ಫ್ಲಾಟಲ್ಲಿ ಒಂದ್ ಕೊಡ ಇಲಿಪಾಯಿಸನ್ ಕುಡ್ದು ಸತ್ತ ನೋಡು....'

'ಅದೇ ಮಾರಾಯ... ಅಷ್ಟೆಲ್ಲ ಬುದ್ಧಿ ಇದ್ರೂ ಈ ತರ ಕಡೇಲಿ... ಬಟ್ ಅವ್ನ ಹೆಂಡ್ತಿ ಆಮೇಲೆ ಪರ್ವಾಗಿಲ್ಲ... ಪೊಲಿಟಿಕಲೀ ಆಕ್ಟೀವ್ ಆದ್ಲೂ... ಟಿಕೆಟ್ ಕೂಡ ಕೊಟ್ರು ಅನ್ಸುತ್ತೆ ಆಮೇಲೆ ಅವ್ಳಿಗೆ...'

'ಹೌದು ಈ ಘಟನೆಯಿಂದ ಎಲ್ಲಾ ಶುರು ಆಗಿದ್ದು ಎಲ್ಲ...'

'ಒಳ್ಳೆ ಹೆಂಗ್ಸು ಪಾಪ ಅವ್ಳು... ಮನೆಯಿಂದ ಆಚೆ ಹೋಗ್ತಾ ಇರ್ಲಿಲ್ಲ... ಈಗ ನೋಡು ಆಲ್ಮೋಸ್ಟ್ ಗೆದ್ದು ಬಿಡ್ತಾಳೆ... ಮತ್ತೆ ಅವ್ನ ಮಗ್ಳು ಅಷ್ಟೇ.... ಈಗ್ಲೇ ಅವರಮ್ಮನ ಜತೆ ಪಾರ್ಟಿ ಮೀಟಿಂಗೆಲ್ಲ ಹೋಗೋದು ... ಭಯಂಕರ ಸ್ಪೀಚ್ ಕೊಡೋದು ಎಲ್ಲ ಮಾಡ್ತಾಳೆ.... ಸೆವೆಂಟೀಸಿ ಯುದ್ಧ... ಮತ್ತೆ ಎಮರ್ಜೆನ್ಸಿ ಅದ್ರ ಬಗ್ಗೆಯೆಲ್ಲ